# ಕ್ರೀಡಾ ವರದಿ 2019-20

"ಸದೃಢ ದೇಹದಲ್ಲಿ ಸದೃಢ ಮನಸ್ಸು" ಎಂಬ ಹೇಳಿಕೆಯಲ್ಲಿ ನಮ್ಮ ಪ್ರಸ್ತುತ ಸಮಾಜದಲ್ಲಿ ಕ್ರಿಡೆ ಮತ್ತು ಆರೋಗ್ಯದ ಮಹತ್ವ ತಿಳಿಯುತ್ತದೆ. ಆಹಾರದಲ್ಲಿ ಕಲಬೆರಕೆ ರಾಸಯನಕಗಳ ಅಳವಡಿಕೆ ಗಾಳಿಯಲ್ಲಿ ಅಶುದ್ಧತೆ, ಕುಡಿಯುವ ನೀರಿನಲ್ಲಿ ಕಶ್ಮಲತೆ, ಇರುವಂತಹ ಈ ಕಾಲದಲ್ಲಿ ಆರೋಗ್ಯವನ್ನು ಸುಸ್ಥಿತಿಯಲ್ಲಿಡಲು ಏಕೈಕ ಮಾರ್ಗ ಎಂದರೆ ಅದು ಕ್ರೀಡೆ ಮತ್ತು ದೈಹಿಕ ಶಿಕ್ಷಣದಲ್ಲಿ ಭಾಗವಹಿಸುವುದೇ ಆಗಿದೆ. ಪ್ರಸ್ತುತದಲ್ಲಿ ಯಾವುದೇ ರೋಗವನ್ನು ಹೊತ್ತು ವೈದ್ಯರ ಬಳಿ ತೆರಳಿದಾಗ ಅವರು ನೀಡುವ ಸಲಹೆಗಳೆಂದರೆ ಪ್ರತಿದಿನ ದೈಹಿಕ ಕಸರತ್ತು, ದೈಹಿಕ ಶ್ರಮವಹಿಸುವುದೇ ಆಗಿದೆ. ಅದು ನಡೆಯುವುದು ಆಗಿರಲಿ, ಓಡುವುದು ಆಗಿರಲಿ, ಯೋಗ ಮಾಡುವುದಾಗಲಿ ಇತ್ಯಾದಿಗಳು.

2019-20ನೇ ಸಾಲಿಗಾಗಿ ಕಾಲೇಜಿನ ಕ್ರೀಡಾ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯಲ್ಲಿ ಪ್ರೊ. ಲಕ್ಷ್ಮಿ ಎಸ್ ಎಸ್, ಪ್ರೊ. ಪ್ರತಿಮ ಬಿ ಟಿ, ಶ್ರೀ ಮೋಹನ್ ಕುಮಾರ್ ಸಿ ಬಿ ರವರನ್ನು ಅಧ್ಯಾಪಕ ಮತ್ತು ಅಧ್ಯಾಪಕೇತರ ತಂಡದಿಂದ ಆಯ್ಕೆ ಮಾಡಲಾಯಿತು ವಿದ್ಯಾರ್ಥಿ ಪ್ರತಿನಿಧಿಗಳಾಗಿ ಸಂಜಯ್ ಎಸ್ ಮತ್ತು ಸುಷ್ಮಾ ಬಿ ರವರನ್ನು ಆಯ್ಕೆ ಮಾಡಲಾಯಿತು.

ಕ್ರೀಡೆಯಲ್ಲಿ ಭಾಗವಹಿಸುವುದರಿಂದ ದೈಹಿ ಆರೋಗ್ಯದ ಜೊತೆಗೆ ಮಾನಸಿಕ ಆರೋಗ್ಯ ವೃದ್ಧಿಯಾಗುತ್ತದೆ. ಈ ಮೂಲಕ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಕ್ರೀಡೆ ನಾಂದಿಯಾಗುತ್ತದೆ. ಕ್ರೀಡೆಯು ಕೇವಲ ಆರೋಗ್ಯ ವೃದ್ಧಿಗಷ್ಟೆ ಕಾರಣವಾಗದೇ. ಉದ್ಯೋಗ, ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಮಾರ್ಗಗಳನ್ನು ಕಂಡುಕೊಳ್ಳಬಹುದಾಗಿದೆ. ಈ ದಿಶೆಯಲ್ಲಿ ಕ್ರೀಡೆಯನ್ನು ಉನ್ನತಿಕರಿಸುವ ದೃಷ್ಟಿಯಿಂದ ಹಾಗೂ ವಿದ್ಯಾರ್ಥಿಗಳಲ್ಲಿ ಆರೋಗ್ಯವನ್ನು ವೃದ್ಧಿಸುವ ದೃಷ್ಟಿಯಿಂದ, ಹೆಚ್ಚೆಚ್ಚು ಕ್ರೀಡೆಗಳಲ್ಲಿ ಭಾಗವಹಿಸದಿ ಪ್ರಶಸ್ತಿ ಪಡೆಯುವ ದೃಷ್ಟಿಯಿಂದ ಕಾಲೇಜಿನಲ್ಲಿ 2019-20 ನೇ ಸಾಲಿನಲ್ಲಿ ಹಮ್ಮಿಕೊಂಡ ವಿವರ ಕಾರ್ಯಕ್ರಮಗಳ ವಿವರ ಈ ಕೆಳಕಂಡಂತಿವೆ.

ದಿನಾಂಕ:27.07.2019ರಂದು ಕಾಲೇಜಿನ ವಿದ್ಯಾರ್ಥಿಗಳಗಾಗಿ ಗಾಳಿಪಟ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಪುರುಷರ ವಿಭಾಗದಲ್ಲಿ ಪ್ರಥಮ ಸ್ಥಾನ ಮನು ಹೆಚ್ ಎಸ್ ಪಡೆದರು, ದ್ವಿತೀಯ ಸ್ಥಾನವನ್ನು ಸಚ್ಚಿದಾನಂದ ಪೂಜಾರಿ ಮತ್ತು ಸಾಗರ್, ತೃತೀಯ ಸ್ಥಾನ ಬ್ರಹ್ಮಲಿಂಗು ಮತ್ತು ಮಹೇಶ್, ಸಮಾಧಾನಕರ ಬಹುಮಾನ ಯೋಗೇಶ್ ಎಂ ಎನ್ ಮತ್ತು ಯೋಗೇಶ್ ವೈ ಕೆ ಪಡೆದರು. ಮಹಿಳೆಯರ ವಿಭಾಗ ಪ್ರಥಮ ಸ್ಥಾನವನ್ನು ಚೇತನ ಕೆ ಮತ್ತು ರಂಜಿತ ಿ ಪಡೆದರೆ, ದ್ವಿತೀಯ ಸ್ಥಾನವನ್ನು ಸಹನ ಮತ್ತು ನಿವೇದಿತಾ ಪಡೆದರು.

2019-20ನೇ ಸಾಲಿನ ಮೈಸೂರು ವಿಶ್ವ ವಿದ್ಯಾನಿಲಯ ಕೃಷ್ಣರಾಜ ವಲಯ ಪುರುಷರ ಚೆಸ್ ಪಂದ್ಯಾವಳಿಗೆ ಭಾಗವಹಿಸಿದ್ದ ನಮ್ಮ ಕಾಲೇಜಿನ ತಂಡ ಪಂದ್ಯಾವಳಿಯಲ್ಲಿ ತೃತೀಯ ಸ್ಥಾನ ಪಡೆದಿರುತ್ತಾರೆ. ಸಂಜಯ್ ಎಸ್, ಹೇಮಂತ್ ರಾಜ್ ಕೆ ಎನ್ ಮನುಕುಮಾರ್ ವೈ ಎಂ ರಕ್ಷಿತ್ ಕುಮಾರ್ ಬಿ ಎ ಮತ್ತು ಪೌಲನ್ ಬಿ ವಿ ಈಪಂದ್ಯಾವಳಿಗೆ ಭಾಗವಹಿಸಿರುತ್ತಾರೆ.

ದಿನಾಂಕ:15.08.2019ರ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮವನ್ನು ಕ್ರೀಡಾ ವಿಭಾಗದಿಂದ ಆಯೋಜಿಸಲಾಗಿತ್ತು. ಕಾಲೇಜಿನ ಹಿರಿಯ ವಿದ್ಯಾರ್ಥಿಯಾದ ಪ್ರಸ್ತುತ ಸೇನೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನವೀನ್ ಕೆ ಧ್ವಜಾರೋಹಣ ಮಾಡಿದರು. ಕಾಲೇಜಿನ ಪ್ರಾಂಶುಪಾಲರಾದ ಬಿ.ಜಯಲಕ್ಷ್ಮಿಯವರು ಸ್ವಾತಂತ್ರ್ಯ ದಿನದ ಮಹತ್ವದ ಬಗ್ಗೆ ತಿಳಿಸಿಕೊಟ್ಟರು ಕಾರ್ಯಕ್ರಮದಲ್ಲಿ ಕಾಲೇಜಿನ ಅಧ್ಯಾಪಕರು, ಅಧ್ಯಾಪಕೇತರರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೈಸೂರು ವಿಶ್ವವಿದ್ಯಾನಿಲಯ ಕೃಷ್ಣರಾಜ ವಲಯ ಪುರುಷರ ಟೇಬಲ್ ಟೆನ್ನಿಸ್ ಪಂದ್ಯಾವಳಿಗೆ ನಮ್ಮ ಕಾಲೇಜಿನ ವಿದ್ಯಾರ್ಥಿಗಳಾದ ತೇಜಸ್ ಆರ್, ಶಶಾಂಕ್ ಹೆಚ್ ಕೆ, ರಾಜೇಶ್, ಮನೋಜ್, ಸಿದ್ದರಾಜು ಭಾಗವಹಿಸಿದ್ದರು. ಈ ಪಂದ್ಯಾವಳಿಯಲ್ಲಿ ನಮ್ಮ ಕಾಲೇಜಿನ ತಂಡ ಸೆಮಿಫೈನಲ್‌ಗೆ ತಲುಪಿತು.ಪಂದ್ಯಾವಳಿಯನ್ನು ಶ್ರೀ ಡಿ ಡಿ ಅರಸ್ ಪ್ರಥಮ ದರ್ಜೆ ಕಾಲೇಜು ಹುಣಸೂರು ರವರು ದಿನಾಂಕ:28.08.2019 ರಂದು ಆಯೊಜಿಸಿದ್ದರು. ದಿನಾಂಕ:30.08.2019 ರಂದು ಮೈಸೂರು ವಿಶ್ವ ವಿದ್ಯಾನಿಲಯ ಕೃಷ್ಣರಾಜ ವಲಯ ಬ್ಯಾಟ್ಮಿಂಟನ್ ಪಂದ್ಯಾವಳಿಯನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬೀಳಿಕೆರೆ ಇವರು ಆಯೋಜಿಸಿದ್ದರು. ಈ ಪಂದ್ಯಾವಳಿಗೆ ನಮ್ಮ ಕಾಲೇಜಿನ ವಿದ್ಯಾರ್ಥಿಗಳಾದ ನವೀನ್ ವಿ, ಪ್ರಶಾಂತ್ ಆರ್ ಪಿ, ಮೋಹನ್ ವಿ, ಸಂಜಯ್ ಎಸ್ ಮತ್ತು ಪೌಲನ್ ಬಿ ವಿ ಭಾಗವಹಿಸಿದ್ದರು.

ಮೈಸೂರು ವಿಶ್ವ ವಿದ್ಯಾನಿಲಯ ಅಂತರ ಕಾಲೇಜುಗಳ ಹತ್ತು ಕಿಲೋ ಮೀಟರ್ ಗುಡ್ಡಗಾಡು ಓಟ ಸ್ಪರ್ಧೆಯನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಚನ್ನರಾಯಪಟ್ಟಣ ಿಲ್ಲಿ ಆಯೋಜಿಸಲಾಗಿತ್ತು. ಈ ಸ್ಪರ್ಧೆಗೆ ನಮ್ಮ ಕಾಲೇಜಿನ ವಿದ್ಯಾರ್ಥಿಗಳಾದ ರವಿರಾಜ್ ವಿ, ಯೋಗೇಶ್ ಕೆ ಹೆಚ್, ಮಂಜುನಾಥ ವಿ, ಮತ್ತು ಮನುಕುಮಾರ್ ವೈ ಎಂ ಭಾಗವಹಿಸಿದ್ದರು.

ಮೈಸೂರು ವಿಶ್ವ ವಿದ್ಯಾನಿಲಯ ಕೃಷ್ಣರಾಜ ವಲಯ ಮಹಿಳೆಯರ ವಾಲಿಬಾಲ್ ಪಂದ್ಯಾವಳಿಯನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪಿರಿಯಾಪಟ್ಟಣ ಇವರು ಆಯೋಜಿಸಿದ್ದರು, ಈ ಕ್ರೀಡಾ ಕೂಟದಲ್ಲಿ ನಮ್ಮ ಕಾಲೇಜು ತಂಡ ಭಾಗವಹಿಸಿ ಸೆಮಿಫೈನಲ್ ಹಂತದಲ್ಲಿ ಪರಾಭವಗೊಂಡಿತು. ಈ ವಾಲಿಬಾಲ್ ತಂಡದಲ್ಲಿ ಸುಷ್ಮ ಬಿ, ಸ್ನೇಹ ಕೆ, ಅರ್ಪಿತಾ ಹೆಚ್ ಪಿ, ಗಾಯಿತ್ರಿ ಬಿ ಆರ್ ಅರ್ಚನ ಎಂ, ಕುಸುಮ ಹೆಚ್ ಕೆ, ಚಂದನ ಹೆಚ್ ಬಿ, ಪಾವನ ಹೆಚ್ ಎನ್, ಯಶಸ್ವಿನಿ ಹೆಚ್ ಎನ್ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ದಿನಾಂಕ: 18.09.2019 ರಂದು ನಡೆದ ತಾಲೂಕು ಮಟ್ಟದ ದಸರಾ ಮಟ್ಟದ ಕ್ರೀಡಾ ಕೂಟದ 5000 ಮೀ ಓಟದ ಸ್ಪರ್ಧೆಯಲ್ಲಿ ಕಾಲೇಜಿನ ವಿದ್ಯಾರ್ಥಿ ರವಿರಾಜ್ ವಿ ಭಾಗವಹಿಸಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ.

ದಿನಾಂಕ:18.09.2019 ರಿಂದ 20.09.2019 ರವರೆಗೆ ನಡೆದ ಮೈಸೂರು ವಿಶ್ವ ವಿದ್ಯಾನಿಲಯ ಅಂತರ ಕಾಲೇಜುಗಳ ಕುಸ್ತಿ ಕರಾಟೆ ಸ್ಪರ್ಧೆಗೆ ಕಾಲೇಜಿ ವಿದ್ಯಾರ್ಥಿಗಳಾದ ಸಂಜಯ್ ಎಸ್ ಮತ್ತು ನವೀನ್ ವಿ ಭಾಗವಹಿಸಿದ್ದರು. ದಿನಾಂಕ:24.09.2019 ರಿಂದ 26.09.2019 ರವರೆಗೆ ನಡೆದ ಅಂತರ ಕಾಲೇಜುಗಳ ಅಥ್ಲೆಟಿಕ್ ಕ್ರೀಡಾ ಕೂಟದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ದಿನಾಂಕ:21.12.2019 ರಂದು ನಮ್ಮ ಕಾಲೇಜಿನಲ್ಲಿ ಜೀವನ ಕೌಶಲ್ಯ ತರಬೇತಿ ಶಿಬಿರವನ್ನು ಏರ್ಪಡಿಸಲಾಗಿದ್ದು ಈ ಕಾರ್ಯಕ್ರಮವನ್ನು ಯುವ ಸ್ಪಂದನ ವಿಭಾಗದ ವತಿಯಿಂದ ನಡೆಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಶ್ರೀ ರಾಘವೇಂದ್ರರವರು ಯುವ ಪರಿ ವರ್ತಕರು ಯುವ ಸ್ಪಂದನ ವಿಭಾಗ ಮೈಸೂರು ರವರು ಹಲವಾರು ಚಟುವಟಿಕೆಗಳ ಮೂಲಕ ಕರ್ಯಕ್ರಮವನ್ನು ನಡೆಸಿಕೊಟ್ಟರು.

24.01.2020 ರಂದು ಮೈಸೂರು ವಿಶ್ವ ವಿದ್ಯಾನಿಲಯ ಕೃಷ್ಣರಾಜ ವಲಯ ಪುರುಷರ ಸಾಫ್ಟ್ ಬಾಲ್ ಪಂದ್ಯಾವಳಿಯನ್ನು ನಮ್ಮ ಕಾಲೇಜಿನ ವತಿಯಿಂದ ಆಯೊಜಿಸಲಾಗಿತ್ತು ಈ ಪಂದ್ಯಾವಳಿಯಲ್ಲಿ ನಮ್ಮ ಕಾಲೇಜಿನ ತಂಡ ಪ್ರಥಮ ಸ್ಥಾನ ಪಡೆಯಿತು ದ್ವಿತಿಯ ಸ್ಥಾನವನ್ನು ಹೆಚ್ ಡಿಕೋಟೆ ಪಡೆಯಿತು.

ಮಹಿಳೆಯರ ವಿಭಾಗದ ಅಂತರ ಕಾಲೇಜುಗಳ ಅಂತರ ವಲಯ ಕ್ರೀಡಾಕೂಟವು ದಿನಾಂಕ 04.02.2020. ರಿಂದ 06.02.2020 ರವರೆಗೆ ಭಾರತೀ ಕಾಲೇಜು ಭಾರತಿ ನಗರ ಇಲ್ಲಿಆಯೊಜನೆ ಗೊಂಡಿತು ಈ ಕ್ರೀಡಾ

ಕೂಟದ ಚೆಸ್ ಪಂದ್ಯಾವಳಿಗೆ ನಮ್ಮ ಕಾಲೇಜಿನ ಚೆಸ್ ಆಟಗಾರ್ತಿಯರಾದ ಚಿತ್ರಲೇಖ ಡಿ ಎನ್, ದೀಪಿಕಾ ಡಿ ಕೆ, ಬಿಂದು ಡಿ ಎಂ ಜ್ಯೋತಿ ಸಿ ಮತ್ತು ಪಾರ್ವತಿ ಬಿ ಎಸ್ ಭಾಗವಹಿಸಿದ್ದರು.

ದಿನಾಂಕ:10.02.2020 ರಂದು ರಾಷ್ಟ್ರೀಯ ಜಂತುಹುಳು ನಿವಾರಣೆಯ ಅಂಗವಾಗಿ ಕಾರ್ಯಕ್ರಮವನ್ನು ಕ್ರೀಡಾ ವಿಭಾಗದ ವತಿಯಿಂದ ಏರ್ಪಡಿಸಲಾಗಿತ್ತು ಜಂತುಹುಳು ನಿವಾರಣೆ ಹಾಗೂ ಸ್ವಚ್ಛತೆಯ ಬಗ್ಗೆ ಪ್ರಾಥಮಿಕ ಾರೋಗ್ಯ ಕೇಂದ್ರ ದೊಡ್ಡ ಮುಲಗೂಡು ಇಲ್ಲಿಗೆ ಸಿಬ್ಬಂಧಿಗಳು ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡಿ 19 ವರ್ಷದ ಒಳಗಿನ ಎಲ್ಲಾ ವಿದ್ಯಾರ್ಥಿಗಳಿಗೆ ಜಂತುಹುಳು ನಿವಾರಣ ಮಾತ್ರೆಯನ್ನು ನೀಡಿದರು ಈ ಕಾರ್ಯಕ್ರಮದಲ್ಲಿ ಜಯಶಂಕರ್ ದೈಹಿಕ ಶಿಕ್ಷಣ ನಿರ್ದೇಶಕರು ರವರು ನಿರೂಪಿಸಿದರು. ಪ್ರಾಂಶುಪಾಲರಾದ ಶ್ರೀಮತಿ ಬಿ ಜಯಲಕ್ಷ್ಮಿ ಅಧ್ಯಕ್ಷತೆ ವಹಿಸಿದ್ದರು.

2019-20 ನೇ ಸಾಲಿನ ಕಾಲೇಜಿನ ವಾರ್ಷಿಕ ಕ್ರೀಡಾಕೂಟವನ್ನು ನಡೆಸಲಾಯಿತು ಮಹಿಳೆಯರಿಗಾಗಿ ಥ್ರೋಬಾಲ್ ವಾಲಿಬಾಲ್, ಬಾಲ್ ಬ್ಯಾಡ್ಮಿಂಟನ್, ಷಟಲ್ ಬ್ಯಾಡ್ಮಿಂಟನ್, ಚೆಸ್ ಮತ್ತು ಅಥ್ಲೆಟಿಕ್ ಸ್ಪರ್ಧೆಗಳನ್ನು ನಡೆಸಲಾಯಿತು. ಪುರುಷರಿಗಾಗಿ ವಾಲಿಬಾಲ್ ಬ್ಯಾಡ್ಮಿಂಟನ್, ಷಟಲ್ ಬ್ಯಾಡ್ಮಿಂಟನ್, ಚೆಸ್, ಟೇಬಲ್ ಟೆನ್ನಿಸ್ ಮತ್ತು ಅಥ್ಲೆಟಿಕ್ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು. ವಿಜೇತರಿಗೆ ಬಹುಮಾನಗಳನ್ನು ನೀಡಲಾಯಿತು. ಮಹಿಳಾ ವಿಭಾಗದಲ್ಲಿ ಚಾಂಪಿಯನ್ ಆಗಿ ಚೈತ್ರ ಆರ್ ಪಡೆದರೆ ಪುರುಷರ ವಿಭಾಗದಲ್ಲಿ ಮನೋಜ್ ಚಾಂಪಿಯನ್ ಆದರು.

ಈ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಲು ಸಹಕರಿಸಿದ ಕಾಲೇಜಿನ ಪ್ರಾಂಶುಪಾಲರಿಗೆ ಕ್ರೀಡಾ ಸಮಿತಿಯವರಿಗೆ ಎಲ್ಲಾ ಸದಸ್ಯರಿಗೆ ಅಧ್ಯಾಪಕ, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.